ಎಮ್.ವಿ.ಸಿ. ನಂ.270/2024

PW-1

ದಿನಾಂಕಃ 22-01-2026.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ SVP ಮಾನ್ಯ ವಕೀಲರಿಂದಃ**

ಸದರಿ ಅಪಘಾತವಾದ ದಿನದಂದು ನಾನು ನನ್ನ ಮೋಟಾರ ಸೈಕಲ ಮೇಲೆ ಶಹಾಪೂರ ಕಡೆ ಮುಖ ಮಾಡಿ ಹೋಗುತ್ತಿದ್ದೆ. ಸದರಿ ದಿನದಂದು ನನಗೆ ಡಿಕ್ಕಿಪಡಿಸಿರುತ್ತೆ ಎಂದು ಹೇಳಿರುವ ವಾಹನವು ಶಹಾಪೂರದಿಂದ ಕಲಬುರಗಿಯ ಕಡೆಗೆ ಹೋಗುತ್ತಿತ್ತು. ನಾನು ಕಲಬುರಗಿಯಿಂದ ಶಹಾಪುರ ಕಡೆಗ ಬರುತ್ತಿದ್ದೆ. ಶಹಾಪೂರ - ಕಲಬುರಗಿ ರಸ್ತೆಯು ಹೆದ್ದಾರಿಯಾಗಿದ್ದು ಹೋಗುವ ಹಾಗೂ ಬರುವ ವಾಹನಗಳಿಗೆ ಪ್ರತ್ಯೇಕವಾಗಿ ದಿಕ್ಕುಗಳು ಇರುತ್ತವೆ ಎಂದರೆ ಸರಿ.

2. ನಾನು ಸದರಿ ದಿನದಂದು ಬೈಕ ಮೇಲೆ ಹೋಗುತ್ತಿದೆ ಎಂದರೆ ಸರಿ. ನನ್ನ ಸದರಿ ವಾಹನ ನಂಬರ KA-33-Ed-8468 ಇರುತ್ತದೆ ಎಂದರೆ ಸರಿ. ನಾನು ಸದರಿ ವಾಹನವನ್ನು ಚಲಾಯಿಸಲು ಚಾಲನಾ ಪತ್ರವನ್ನು ಹೊಂದಿರಲಿಲ್ಲ. ಸದರಿ ವಾಹನದ ಮಾಲಿಕರು ನನ್ನ ಮಗ ಶ್ರೀ ಮಲ್ಲಿಕಾರ್ಜುನ ಇವರು ಆಗಿರುತ್ತಾರೆ. ಪೊಲೀಸರು ನನ್ನ ಹಾಗೂ ನನ್ನ ಮಗನ ಮೇಲೆಯೂ ಕೂಡಾ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನಗೆ ಸದರಿ ವಾಹನ ನಡೆಸಲು ಬರದ ಕಾರಣ ನಾನು ನನ್ನ ಎದುರಿನಿಂದ ಬರುತ್ತಿದ್ದ ಲಾರಿಗೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಗೂ ಪೊಲೀಸರು ಶಾಮಿಲಾಗಿ ಸದರಿ ಲಾರಿಯ ಮೇಲೆ ಸುಳ್ಳಾದ ಪ್ರಕರಣವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

3. ಸದರಿ ಅಪಘಾತದಲ್ಲಿ ನನಗೆ ಯಾವುದೇ ರೀತಿಯಾದ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ನಾನು ಸುಬೇದಾರ

ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನನಗೆ ಸದರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ನನ್ನ ಮಗ ಕರೆದುಕೊಂಡು ಹೋಗಿರುತ್ತಾರೆ. ಸದರಿ ಅಪಘಾತಕ್ಕಾದಂತೆ ನನ್ನ ಸದರಿ ಮಗ ಸದರಿ ವೈದ್ಯರಿಗೆ ಸದರಿ ಅಪಘಾತ ಯಾವ ರೀತಿಯಾಗಿರುತ್ತದೆ ಎಂದು ಹೇಳಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಅಪಘಾತವಾದಾಗ ನಾನು ಮೂರ್ಚೆಗೊಂಡಿದ್ದೆ. ನಾನು ಸದರಿ ಸುಭೇದಾರ ಆಸ್ಪತ್ರೆಯಲ್ಲಿ 1 ವಾರ ಒಳರೋಗಿಯಾಗಿ ದಾಖಲಾಗಿದ್ದೆ. ನಾನು ಸದರಿ ಆಸ್ಪತ್ರೆಯಲ್ಲಿ ಹೊರತುಪಡಿಸಿದರೆ ಬೇರೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ.

4. ಅಪಘಾತವಾದ 2 ಗಂಟೆಗಳ ನಂತರ ನನಗೆ ಪ್ರಜ್ಞೆ ಬಂದಿರುತ್ತದೆ. ನನಗೆ ಪ್ರಜ್ಞೆ ಬಂದ ನಂತರ ವೈದ್ಯರು ನನಗೆ ಸದರಿ ಅಪಘಾತದ ಬಗ್ಗೆ ಕೇಳಿದ್ದು ನಾನು ಅವರಿಗೆ ವಿವರಿಸಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಪೊಲೀಸರು ನನಗೆ ಬಂದು ವಿಚಾರಿಸಿರುವುದಿಲ್ಲ. ನಾನು ICU ನಲ್ಲಿದ್ದೆ. ನಾನು ICU ಗೆ ಹೋಗುವವರೆಗೂ ಹಾಗೂ ICU ನಿಂದ ಬಂದ ನಂತರವೂ ಕೂಡಾ ಪೊಲೀಸರು ನನಗೆ ಸದರಿ ಅಪಘಾತದ ಬಗ್ಗೆ ವಿಚಾರಿಸಿರುವುದಿಲ್ಲ. ನನಗೆ ಅಪಘಾತವಾದ ಮೂರು ದಿನಗಳ ನಂತರ ನನ್ನನ್ನು ICU ಗೆ ದಾಖಲು ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತಕ್ಕಾದಂತೆ ದೂರನ್ನು ನನ್ನ ಮಗ ಕೊಟ್ಟಿರುತ್ತಾರೆ. ಸದದಿ ಅಪಘಾತವಾದ 2 ದಿನಗಳ ನಂತರ ನಾನು ಹಾಗೂ ನನ್ನ ಮಗ ಸೇರಿ ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ 2 ದಿನಗಳವರೆಗೆ ಪೊಲೀಸರು ನನ್ನ ವಿಚಾರಣೆಗೆ ಬಂದಿರುವುದಿಲ್ಲ ಎಂದರೆ ಸರಿ. ಸದರಿ ಎಲ್ಲಾ ವಿಚಾರಗಳು ನನ್ನ ಮಗನಿಗೆ ತಿಳಿದಿದ್ದು ಅವರಿಗ ಕೇಳಬೇಕು. ಸದರಿ ವಿಚಾರವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಈ ಮೊದಲು ಹೊಟೇಲ ವ್ಯಾಪಾರವನ್ನು ಹೊಂದಿದ್ದೆ. ನಾನು ಈಗಲೂ ಕೂಡಾ ಸದರಿ ಹೊಟೇಲ ವ್ಯಾಪಾರನ್ನು ಹೊಂದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈಗ ನಿಮ್ಮ ಹೋಟೇಲಿನಲ್ಲಿ ಎಷ್ಟು ಜನ ಕೆಲಸಗಾರರು ಇರುತ್ತಾರೆ ಎಂದು ಕೇಳಿದ್ದಕ್ಕೆ ಸಾಕ್ಷಿ ತಾವು ತಮ್ಮ ಹೊಟೇಲನ್ನು ಈಗ ಮುಚ್ಚಿರುವುದಾಗಿ ಹೇಳುತ್ತಾರೆ. ನಾನು ಯಾವುದೇ ಹೊಟೇಲ ಉದ್ಯಮವನ್ನು ಮಾಡುತ್ತಿರಲಿಲ್ಲ ಹಾಗೂ ಅದನ್ನು ಈಗ ಮುಚ್ಚಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸದರಿ ಅಪಘಾತವಾದ ದಿನಾಂಕದಂದು ನನ್ನ ವಯಸ್ಸು ಎಷ್ಟು ಇತ್ತು ಎಂದು ತೋರಿಸಲು ನಾನು ಆಧಾರ ಕಾರ್ಡ ನ್ನು ಹಾಜರುಪಡಿಸಿರುವುದಿಲ್ಲ. ನನ್ನ ಆಧಾರ ಕಾರ್ಡನ ಪ್ರಕಾರ ನನ್ನ ವಯಸ್ಸು 70 ವರ್ಷಕಿಂತ ಮೇಲ್ಪಟ್ಟು ಆಗಿರುತ್ತದೆ ಎಂದು ತಿಳಿದು ಬರುವ ಕಾರಣ ನಾನು ಅದನ್ನು ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾಹನದಿಂದ ನಾನಾಗಿನೇ ಬಿದ್ದು ಗಾಯಮಾಡಿಕೊಂಡಿದ್ದರೂ ಕೂಡಾ ಸದರಿ ಲಾರಿಯ ಚಾಲಕನ ಮೇಲೆ ಸುಳ್ಳಾದ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ದಾಖಲೆಗಳಲ್ಲಿ ನನ್ನ ವಯಸ್ಸು 55 ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರದ ಹಣವನ್ನು ಪಡೆಯಲು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಕೂಡಾ ಸದರಿ ಲಾರಿಯ ಚಾಲಕನ ಮೇಲೆ ಸುಳ್ಳಾದ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸುಳ್ಳಾದ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.